ESI.A.No.17/2022

RW-1,

ದಿನಾಂಕಃ 28-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಅರ್ಜಿದಾರರ ಪರವಾಗಿಃ ಶ್ರೀ. RS ವಕೀಲರಿಂದ

ಅರ್ಜಿದಾರರಿಗೆ ಇ ಎಸ್ ಐ ಕೋಡನ್ನು ನಾವೇ ವಿಸಿಟ್ ಮಾಡಿ ಅಲಾಟ್ ಮಾಡಿದ್ದೇವೆ ಎಂದರೆ ನಿಜ. ಅರ್ಜಿದಾರ ಸಂಸ್ಥೆಯಲ್ಲಿ 11 ಕಾರ್ಮಿಕರು ಇದ್ದಾರೆ. ಕೋಡ್ ನಂಬರನ್ನು 1-7-2011 ರಿಂದ ಕವರೇಜ್ ಆಗುವಂತೆ ನೀಡಲಾಗಿರುತ್ತದೆ. ಕಲಂ 45 ಎ ರಡಿಯಲ್ಲಿ ಆದೇಶವನ್ನು 21-10-2016 ರಂದು ರೂ.76,684-00 ಬಗ್ಗೆ ಮಾಡಲಾಗಿರುತ್ತದೆ. ಈ ಆದೇಶವನ್ನು ಅರ್ಜಿದಾರರು ಇ ಎಸ್ ಐ 2/2017 ರಲ್ಲಿ ಪ್ರಶ್ನಿಸಿದ್ದಾರೆ ಎಂದರೆ ನಿಜ. ನ್ಯಾಯಾಲಯವು ಆಕ್ಚುವಲ್ ವೇಜಸ್ ಮೇಲೆ ರಿ ಅಸ್ಮೆಂಟ್ ಮಾಡಿ ಎಂದು ಆದೇಶ ನೀಡಿರುತ್ತದೆ. ನ್ಯಾಯಾಲಯದ ಆದೇಶದಂತೆ ನಾವು ರಿ ಅಸ್ಮೆಂಟ್ ಮಾಡಿದ್ದೇವೆ. ಈ ಹಿಂದೆ ಮಾಡಿದ್ದ ಆದೇಶದಲ್ಲಿ ಹೇಳಿದ್ದ ವಂತಿಗೆ ಹಣವನ್ನು ಕಡಿಮೆ ಮಾಡಿ ದಿನಾಂಕಃ6-11-2020 ರಂದು ಆದೇಶ ಮಾಡಿದ್ದೇವೆ ಎಂದರೆ ಸಾಕ್ಷಿಯು ಬುಕ್ಸ್ ಆಫ್ ಅಕೌಂಟ್ಸ ಮತ್ತು ರೆಕಾರ್ಡಗಳನ್ನು ನೋಡಿ ರೂ.57,186-00 ಪಾವತಿಸುವಂತೆ ಆದೇಶವನ್ನು ಮಾಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಆದೇಶದ ಪ್ರಕಾರ ದಿಃ8-1-2021 ರಂದು ಅರ್ಜಿದಾರರು ವಂತಿಗೆ ಹಣವನ್ನು ಪಾವತಿ ಮಾಡಿದ್ದಾರೆ ಎಂದರೆ ನಿಜ. ಆದ್ದರಿಂದ ಯಾವುದೇ ವಿಳಂಬ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರು ನೊಂದಾವಣೆ ಮಾಡಿದಂದಿನಿಂದ ಕೆಲಸಗಾರರಿಗೆ ಸಂಬಳ ಕೊಟ್ಟಾಗಿನಿಂದ ವಂತಿಗೆಯನ್ನು ಪಾವತಿಸುವ ಜವಾಬ್ದಾರಿ ಇರುತ್ತದೆ. ಸದರಿ ಜವಾಬ್ದಾರಿಯು ಕೋರ್ಟನಲ್ಲಿ ಕೇಸು ಹಾಕದವರಿಗೆ ಮತ್ತು ವಂತಿಗೆಯನ್ನು ಕಟ್ಟದೇ ಇರುವವರಿಗೆ ಅನ್ವಯಿಸುತ್ತದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶದಂತೆ ನಾವು ತಿದ್ದುಪಡಿ ಆದೇಶ ಮಾಡಿದ ನಂತರ ವಿಳಂಬವನ್ನು ಲೆಕ್ಕಾಚಾರ ಮಾಡಬೇಕಾಗುತ್ತದೆ ಅದರ ಹಿಂದಿನ ಅವಧಿಗೆ ವಿಳಂಬ ಅನ್ವಯಿಸುವುದಿಲ್ಲ ಎಂದರೆ ಸರಿಯುಲ್ಲ. ಈ ಪ್ರಕರಣದಲ್ಲಿ ಶೇಕಡ 100 ಡ್ಯಾಮೇಜಸ್ಸನ್ನು ವಿಧಿಸಿದ್ದೇವೆ ಎಂದರೆ ನಿಜ. ಸೆಪ್ಟಂಬರ್-2011 ರಿಂದ ಜನವರಿ -2021 ರವರೆಗೆ ಡ್ಯಾಮೇಜಸ್ ಕ್ಲೇಮ್ ಮಾಡಿದ್ದೇವೆ. ಕಲಂ 85 ಬಿ ಪ್ರಕಾರ ವಿಳಂಬವಾಗಿದ್ದಲ್ಲಿ ಮಾತ್ರ ಡ್ಯಾಮೇಜಸ್ ಕ್ಲೇಮ್ ಮಾಡಲು ಬರುತ್ತದೆ ನಿಶಾನೆ ಆರ್-5 ರಂತೆ ಆದೇಶವಾದ ನಂತರ ಯಾವುದೇ ವಿಳಂಬವಾಗಿಲ್ಲ ಎಂದರೆ ಸರಿಯಲ್ಲ. ಸೆಪ್ಟಂಬರ್ 2013 ರಿಂದ ಜೂನ್-2018 ರವರೆಗೆ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು ಡ್ಯಾಮೇಜಸ್ ಕ್ಲೇಮ್ ಮಾಡಿದ್ದೇವೆ ಎಂದರೆ ನಿಜ. ನಮ್ಮ ಸಂಸ್ಥೆಗೆ ಇ ಎಸ್ ಐ ಅನ್ವಯಿಸುವುದಿಲ್ಲ ಎಂದು ಅರ್ಜಿದಾರರು ಇ ಎಸ್ ಐ 2/2017 ರಲ್ಲಿ ಹೇಳಿದ್ದರು ಎಂದರೆ ಸಾಕ್ಷಿಯು ಅದು ಬೇರೆ ಅವಧಿಗೆ ಸಂಬಂಧಪಟ್ಟದ್ದು ಆ ಬಗ್ಗೆ ರಿವೈಸ್ಡ ಆರ್ಡರ್ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಕೋರ್ಟನಲ್ಲಿ ಕೇಸು ಪೆಂಡಿಂಗ್ ಇದ್ದ ಕಾರಣ ಸೆಪ್ಟಂಬರ್-2013 ರಿಂದ ಜೂನ್-2018 ರವರೆಗೆ ಇ ಎಸ್ ಐ ವಂತಿಗೆಯುನ್ನು ಅರ್ಜಿದಾರರು ಪಾವತಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ 28-8-2018 ರಂದು ಸಿ-18 ಅದಾಕ್ ನೋಟೀಸನ್ನು ನೀಡಿದ್ದೇವೆ. ಅದರಲ್ಲಿ ರೂ.3,84,599-00 ಹಣವನ್ನು ಕೇಳಿದ್ದೇವೆ. ಅರ್ಜಿದಾರರು ಖುದ್ದು ಸುನಾವಣೆಗೆ ಹಾಜರಾಗಿ ದಾಖಲೆಗಳನ್ನು ಕೊಟ್ಟಿದ್ದಾರೆ ಎಂದರೆ ನಿಜ. ಸದರಿ ದಾಖಲೆಗಳ ಆಧಾರದಲ್ಲಿ ಈ ಹಿಂದೆ ನಿಗಧಿಪಡಿಸಿದ್ದ ರೂ.3,84,599-00 ರ ಬದಲಾಗಿ ನಿಶಾನೆ ಆರ್-10 ರಂತೆ ರೂ.1,66,475-00 ಗಳನ್ನು ನಿಗಧಿಪಡಿಸಿದ್ದೇವೆ ಎಂದರೆ ನಿಜ. ಸದರಿ ಅವಧಿಗೆ 45 ಎ ಆದೇಶ ಮಾಡಿಲ್ಲ ಎಂಬುದು ನಿಜ. 45 ಎ ರಡಿಯಲ್ಲಿ ಆದೇಶ ಮಾಡದಿದ್ದರೂ ಸಹ ಅರ್ಜಿದಾರರು ವಂತಿಗೆಯನ್ನು ಪಾವತಿ

ESI.A.No.17/2022
RW-1,

ಮಾಡಿದ್ದಾರೆ ಎಂದರೆ ಸಾಕ್ಷಿ ಅವರು ಕಟ್ಟಬೇಕಾದ್ದನ್ನು ಕಟ್ಟಿದ್ದಾರೆ ಎಂದು ನುಡಿಯುಿತ್ತಾರೆ. ಸದರಿ ಹಣವನ್ನು ಕಟ್ಟಿರುವುದರಿಂದ ಯಾವುದೇ ವಿಳಂಸಬದ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸಾಕ್ಷಿ ಅವರ ಸಂಬಳದಲ್ಲೇ ಇ ಎಸ್ ಐ ವಂತಿಗೆಯನ್ನು ಕಟಾಯಿಸಿದಾಗ ಪಾವತಿ ಮಾಡಬೇಕಾಗಿತ್ತು ಎಂದು ನುಡಿಯುತ್ತಾರೆ. ಕವರೇಜನ್ನು ಚಾಲೆಂಜ್ ಮಾಡಿರುವ ಕಾರಣ ಎಂಪ್ಲಾಯೀಸ್ ಕಾಂಟ್ರಿಬ್ಯೂಷನ್ ಕಟಾಯಿಸುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ದಿಃ25-1-2021 ರಂದು ರೂ.2,64,010-00 ಗಳನ್ನು ಬಡ್ಡಿಯಾಗಿ ಕೇಳಿದ್ದೇವೆ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಅದನ್ನೂ ಕೂಡ ಅರ್ಜಿದಾರರು ಕಟ್ಟಿದ್ದಾರೆ ಎಂದರೆ ದಾಖಲೆಗಳನ್ನು ನೋಡಿ ಹೇಳಬೇಕಾಗುತ್ತದೆ. ಇ ಎಸ್ ಐ ವಂತಿಗೆಯನ್ನು ನಮ್ಮ ಆದೇಶದಂತೆ ತಕ್ಷಣ ಕಟ್ಟಿರುವುದರಿಂದ ಯಾವುದೇ ವಿಳಂಬವಾಗಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾವು ಕೇಳಿದಂತೆ ಡ್ಯಾಮೇಜಸನ್ನು ಅರ್ಜಿದಾರರು ಪಾವತಿಸಬೇಕಾಗಿಲ್ಲ ಎಂದರೆ ಸರಿಯಲ್ಲ. ನಾವು ಕಳುಹಿಸಿದ ನಿಶಾನೆ ಸಿ-19 ನೋಟೀಸಿನ ಆಧಾರದಲ್ಲಿ ನಂತರ 45 ಎ ಆದೇಶವನ್ನು ಮಾಡಿಲ್ಲ. ಸಾಕ್ಷಿಯು ಆಕ್ಚುವಲ್ಸ್ ಆದೇಶ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಿಶಾನೆ ಆರ್-12 ರಂತೆ ಸಿ-19 ನೋಟೀಸ್ ನೀಡಿದ ತಕ್ಷಣ ಅವರು ವಂತಿಗೆಯನ್ನು ಪಾವತಿ ಮಾಡಿದ್ದಾರೆ ಎಂದರೆ ಕಟ್ಟಬೇಕಾಗಿರುವುದನ್ನು ಕಟ್ಟಿದ್ದಾರೆ ಎಂದು ನುಡಿಯುತ್ತಾರೆ. ಅವರು ಬಡ್ಡಿಯನ್ನೂ ಕೂಡ ಕಟ್ಟಿದ್ದಾರೆ ಎಂದರೆ ನಿಜ. ನಾವು ಒಂದೇ ಅವಧಿಗೆ ನಿಶಾನೆ ಆರ್-18 ಮತ್ತು 19 ರಂತೆ ಬೇರೆ ಬೇರೆ ದಿನಾಂಕದಂದು ಆದೇಶ ಮಾಡಿದ್ದೇವೆ ಎಂದರೆ ನಿಜ. ಅರ್ಜಿದಾರರು ಯಾವುದೇ ವಿಳಂಬ ಮಾಡದೆ ವಂತಿಗೆಯನ್ನು ಮತ್ತು ಬಡ್ಡಿಯನ್ನು ಪಾವತಿ ಮಾಡಿರುವುದರಿಂದ ಯಾವುದೇ ಡ್ಯಾಮೇಜಸ್ಸನ್ನು ಕಟ್ಟಬೇಕಾಗಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.